ವರಾಹಿ ಯೋಜನೆಯಲ್ಲಿ ಅರಣ್ಯ ಅಧಿಕಾರಿಗಳ ಭ್ರಷ್ಟಾಚಾರ

೪೯. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ವರಾಹಿ ಯೋಜನೆಯಲ್ಲಿ ಅರಣ್ಯ ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಕೈಗೊಂಡ ಕ್ರಮವೇನು ?

(ಆ) ಭ್ರಷ್ಟಾಚಾರದ ಬಗ್ಗೆ ಸರ್ಕಾರದ ಗಮನಕ್ಕೆ ಬಂದರೂ ಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು ?

(ಇ) ಎಷ್ಟು ಮಂದಿ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ, ಅವರು ಹೆಸರುಗಳು, ಹುದ್ದೆ, ವಿಳಾಸ ?

(ಈ) ಈ ಭ್ರಷ್ಟ ಅಧಿಕಾರಿಗಳಿಗೆ ಬಡ್ತಿ ನೀಡಿರುವುದು ನಿಜವೆ

(ಉ) ಭ್ರಷ್ಟಾಚಾರದಲ್ಲಿ ನಡೆದ ಹಣದ ಮೊತ್ತವೆಷ್ಟು ?

(ಊ) ಈ ಭ್ರಷ್ಟ ಅಧಿಕಾರಿಗಳು ಭ್ರಷ್ಟರೆಂದು ಯಾವ ವರ್ಷದಲ್ಲಿ ತೀರ್ಮಾನಿಸಿದೆ ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ರಾಜ್ಯದ ಅರಣ್ಯ ಸೇವಾ ನೌಕರರ ವಿರುದ್ಧ ವಿಚಾರಣೆ ನಡೆಸಲು ಉಪ ಲೋಕಾಯುಕ್ತರಿಗೆ ವಹಿಸಲಾಗಿದೆ. ಕಾನೂನು ರೀತಿ, ಭಾರತೀಯ ಅರಣ್ಯ ಸೇವೆಯಲ್ಲಿರುವ ಅಧಿಕಾರಿಗಳ ವಿರುದ್ಧ ವಿಚಾರಣೆ ಪ್ರಾರಂಭಿಸಲಾಗಿದೆ.

(ಆ) ಉದ್ಭವಿಸುವುದಿಲ್ಲ.

(ಇ) ವಿಚಾರಣೆ ನಡೆಯುತ್ತಿದ್ದು ಅದು ಮುಗಿದ ನಂತರ ಗೊತ್ತಾಗುವುದು.

(ಈ) ಕೆಲವು ಅಧಿಕಾರಿಗಳಿಗೆ ಬಡ್ತಿ ನೀಡಿರುವುದು ನಿಜ. ಆದರೆ ವಿಚಾರಣೆ ನಡೆಯುತ್ತಿರುವಾಗ ಬಡ್ತಿ ನೀಡಬಾರದೆಂಬ ನಿರ್ಬಂಧವಿಲ್ಲ.

(ಉ) ವಿಚಾರಣೆ ನಡೆಯುತ್ತಿರುವುದರಿಂದ, ಇನ್ನೂ ಇತ್ಯರ್ಥವಾಗಿಲ್ಲ.

(ಊ) ಉದ್ಭವಿಸುವುದಿಲ್ಲ.

ರೇಷ್ಮೆ ಇಲಾಖೆಯಿಂದ ನೀಡುವ ರೇಷ್ಮೆ ಮೊಟ್ಟೆಗಳು

೯೩೦. ಶ್ರೀ ಅಜ್ಜೀಬಳ ಜಿ. ಎಸ್. ಹೆಗಡೆ (ಅಂಕೋಲಾ).—ಮಾನ್ಯ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರೇಷ್ಮೆ ಇಲಾಖೆಯಿಂದ ನೀಡಲಾಗುವ ಮೊಟ್ಟೆಯನ್ನು ರೈತರು ಒಯ್ದು ಸಾಕಿ ಅದು ಹಣ್ಣಾಗುವ ಸ್ಥಿತಿಗೆ ಬಂದಾಗ ರೋಗ ಬಂದು ಸಾಯುತ್ತಿದ್ದು ಇದರಿಂದ ರೈತನಿಗಾಗುವ ಹಾನಿಗೆ ಪರಿಹಾರ ನೀಡುವ ಅವಕಾಶ ಇದೆಯೆ ;

(ಆ) ಖಾಸಗಿಯವರು ರೇಷ್ಮೆ ಬೆಳೆಗಾರರಿಗೆ ಮೊಟ್ಟೆನೀಡಲು ಅವಕಾಶ ಇದ್ದು ಅವರು ನೀಡಿದ ಮೊಟ್ಟೆ ರೋಗ ಗ್ರಸ್ಥವಾಗಿರುವುವು ಎಂಬ ದೂರು ಇರುವುದರಿಂದ ಇದನ್ನು ತಪ್ಪಿಸಿ ಸರಕಾರವೇ ನೀಡಲು ಸಾಧ್ಯವಿಲ್ಲವೇ ?

ಶ್ರೀ ಕೆ. ಎಂ. ಮುನಿಯಪ್ಪ (ರೇಷ್ಮೆ ಸಚಿವರು).—

(ಅ) ಇಲ್ಲ

(ಆ) ತಕ್ಷಣದಲ್ಲಿ ಸಾಧ್ಯವಿಲ್ಲ